ಅಖಿಲ ಭಾರತ ವೀರಶೈವ ಮಹಾಸಭೆಯ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

ಉದಯಕಾಲ ನ್ಯೂಸ್

ಬೈಲಹೊಂಗಲ: ಅಖಿಲ ಭಾರತ ವೀರಶೈವ ಮಹಾಸಭಾ, ಕರ್ನಾಟಕ ರಾಜ್ಯ ಘಟಕದ ಕಾರ್ಯನಿರ್ವಾಹಕ ಸಮಿತಿ ಸಾಮಾನ್ಯ ಸದಸ್ಯ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬೆಳಗಾವಿ ಜಿಲ್ಲೆಯಿಂದ ಗುರು ಮೆಟಗುಡ್ಡ ಅವರು ಸ್ಪರ್ಧಿಸಿ ಭರ್ಜರಿ ಗೆಲುವು ಸಾಧಿಸಿ, ಬೆಂಗಳೂರಿನ ವೀರಶೈವ ಲಿಂಗಾಯತ ಭವನದಲ್ಲಿ ಶುಕ್ರವಾರ ಜರುಗಿದ ರಾಜ್ಯಮಟ್ಟದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಅಧ್ಯಕ್ಷರಾದ ಶಾಮನೂರು ಶಿವಶಂಕರಪ್ಪ, ಸಂಸದ ಬಿ.ವೈ.ರಾಘವೇಂದ್ರ, ರಾಜ್ಯಾಧ್ಯಕ್ಷ ಶಂಕರ ಬಿದರಿ, ಸಚಿವರಾದ ಈಶ್ವರ ಖಂಡ್ರೆ, ಶರಣಗೌಡ ದರ್ಶಾನಾಪುರ ಸೇರಿದಂತೆ ಅನೇಕರು ಗಣ್ಯ-ಮಾನ್ಯರು ಪದಗ್ರಹಣ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಇದೇ ವೇಳೆ ನೂತನ ಪದಾಧಿಕಾರಿಗಳನ್ನು ಸತ್ಕರಿಸಲಾಯಿತು.

ನಂತರ ಮಾಧ್ಯಮದವರೊಂದಿಗೆ ಗುರು ಮೆಟಗುಡ್ಡ ಮಾತನಾಡಿ, ಸಮಾಜದ ಸಹಸ್ರಾರು ಜನ ಸೇರಿ ನನ್ನನ್ನು ಆಯ್ಕೆ ಮಾಡಿದ್ದೀರಿ. ಸಮಾಜದ ಪ್ರತಿಯೊಂದು ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಿ ಎಲ್ಲರಿಗೂ ಸೂಕ್ತ ನ್ಯಾಯ ಸಿಗಲು ಸಮಾಜದ ಹಿರಿಯರ ಜೊತೆ ಕಂಕಣಬದ್ಧನಾಗಿ ಸೇವೆ ಮಾಡುವೆ. ಬೆಳಗಾವಿ ಜಿಲ್ಲೆಯಿಂದ ಪ್ರಥಮ ಬಾರಿಗೆ ರಾಜ್ಯ ಸಮಿತಿಗೆ ನನ್ನನ್ನ ಆಯ್ಕೆ ಮಾಡಲು ಶ್ರಮಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ಛಾಯಾಶ್ರೀ ಪ್ರಶಸ್ತಿಗೆ ರಮೇಶ ಆಯ್ಕೆ

ಉದಯಕಾಲ ನ್ಯೂಸ್

ಮುಗಳಿಹಾಳ: ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘ (ರಿ) ಬೆಂಗಳೂರು ಇವರ ಆಶ್ರಯದಲ್ಲಿ ನಡೆದ ಛಾಯಾಚಿತ್ರಗ್ರಾಹಕರ ವಸ್ತು ಪ್ರದರ್ಶನದಲ್ಲಿ ಕೊಡಮಾಡುವ ಛಾಯಾಶ್ರೀ ಪ್ರಶಸ್ತಿಗೆ ರಮೇಶ ಲಕ್ಕಪ್ಪ ದಳವಾಯಿ ಆಯ್ಕೆಯಾಗಿದ್ದಾರೆ. ಇವರು ಬೆಳಗಾವಿ ಜಿಲ್ಲೆ ಯರಗಟ್ಟಿ ತಾಲ್ಲೂಕಿನ ಮುಗಳಿಹಾಳ ಗ್ರಾಮದವರು.

ಛಾಯಾಗ್ರಹಣ ಕ್ಷೇತ್ರದಲ್ಲಿ ಹಲವಾರು ವರ್ಷಗಳಿಂದಲೂ ತೊಡಗಿಕೊಂಡ ರಮೇಶ, ಉತ್ತಮ ಛಾಯಾಗ್ರಾಹಕರಾಗಿ ಹೆಸರು ಮಾಡಿದ್ದಾರೆ. ಇವರಿಗೆ ಮುಗಳಿಹಾಳ ಗ್ರಾಮ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ, ಸರ್ವ ಸದಸ್ಯರು, ಹಾಗೂ ಗುರು ಹಿರಿಯರು, ಶಿಕ್ಷಕ ಬಳಗ, ಯುವಬಳಗದವರು ಅಭಿನಂದಿಸಿದ್ದಾರೆ.

ಡಿ. ಕೆಂಪಣ್ಣ ಅವರ ನಿಧನಕ್ಕೆ ತಾಲೂಕು ಗುತ್ತಿಗೆದಾರರ ಸಂಘ ಸಂತಾಪ

ಉದಯಕಾಲ ನ್ಯೂಸ್

ರಾಮದುರ್ಗ: ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಡಿ. ಕೆಂಪಣ್ಣ ಅವರ ಅಕಾಲಿಕ ನಿಧನಕ್ಕೆ ತಾಲೂಕು ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿ ಶ್ರದ್ಧಾಂಜಲಿ ಸಲ್ಲಿಸಿದರು.

ಪಟ್ಟಣದ ಎಂಎಲ್‌ಬಿಸಿಯ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಶ್ರದ್ಧಾಂಜಲಿ ಸಲ್ಲಿಸಿದ ಪದಾಧಿಕಾರಿಗಳು ರಾಜ್ಯಾಧ್ಯಕ್ಷ ಕೆಂಪಣ್ಣ ಅವರ ಹೋರಾಟ ಮತ್ತು ಸೇವೆಯನ್ನು ಬಣ್ಣಿಸಿದರು.

ಸಂತಾಪ ಸಭೆಯಲ್ಲಿ ಗುತ್ತಿಗೆದಾರರ ಸಂಘದ ತಾಲೂಕು ಘಟಕದ ಅಧ್ಯಕ್ಷ ರಮೇಶ ಕಮ್ಮಾರ, ಕಾರ್ಯದರ್ಶಿ ರವಿ ನಂದೆಪ್ಪನವರ, ಖಜಾಂಚಿ ಶಿವಾನಂದ ಧಡೇದ, ಸದಸ್ಯರಾದ ಗಣಪತಿ ಮೇದಾರ, ಅಶೋಕ ಮೆಟಗುಡ್ಡ, ಶ್ರೀಶೈಲ ಈರನಗೌಡ್ರ. ಎಂ.ಬಿ. ಮಾಳಿ, ಡಿ.ಎಂ. ಕಡಪೆ, ಎಚ್.ಬಿ. ಕಿತ್ತೂರ, ದಾನಪ್ಪ ಬಂಡಿವಡ್ಡರ ಮತ್ತು ಬಹದ್ದೂರಖಾನ್ ಉಪಸ್ಥಿತರಿದ್ದರು.

ನಾಳೆ ಪೌರಕಾರ್ಮಿಕರ ದಿನಾಚರಣೆ

ಉದಯಕಾಲ ನ್ಯೂಸ್

ಬೆಳಗಾವಿ: ಬೆಳಗಾವಿ ಮಹಾನಗರ ಪೌರಕಾರ್ಮಿಕರ ದಿನಾಚರಣೆಯ ಅಂಗವಾಗಿ ಸೆ.23 ರಂದು ಜಿಲ್ಲೆಯ ಸುಭಾಷ ನಗರದ ಎಸ್.ಪಿ ಆಫೀಸ್ ಹತ್ತಿರದ ಅರಕ್ಷಕ ತರಬೇತಿ ಮೈದಾನದಲ್ಲಿ ಕ್ರೀಡಾ ಸ್ಪರ್ಧಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಬೆಳಗಾವಿ ಮಹಾನಗರ ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬದಲಾವಣೆ ಬಹು ಶಿಸ್ತಿನ ವಿಷಯ, ಹೊರಗಿನಿಂದ ಬಯಸದೆ ನಮ್ಮಲ್ಲಿಂದಲೇಯಾಗಬೇಕು: ಡಾ.ಕೃಷ್ಣ ಪ್ರಸಾದ.ಆರ್

ಉದಯಕಾಲ ನ್ಯೂಸ್

ಬೆಳಗಾವಿ: ಖಾಸಗಿ ವೈದ್ಯಕೀಯ ಸಂಸ್ಥೆಗಳು ಸರಕಾರದೊಂದಿಗೆ ಜೊತೆಗೂಡಿ, ಸಮಾಜವನ್ನು ಆರೋಗ್ಯವಾಗಿಡಲು ಸಂಶೋಧನೆ ಹಾಗೂ ಅದರ ಪರಿಣಾಮಗಳನ್ನು ಅನುಷ್ಠಾನಕ್ಕೆ ತರಲು ಸದಾ ಕಾರ್ಯನಿರತವಾಗಿರಬೇಕೆಂದು ಕಾಹೆರ (ಕೆಎಲ್‌ಇ ಅಕಾಡೆಮಿ ಆಫ್ ಹೈಯರ ಎಜ್ಯುಕೇಶನ್ ಆಂಡ ರಿಸರ್ಚ)ನ ಉಪಕುಲಪತಿ ಡಾ. ನಿತಿನ ಗಂಗಾಣೆ ಅವರು ಶನಿವಾರ ಹೇಳಿದರು.

ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ನೇತ್ರವೈದ್ಯರಾದ ಡಾ. ಸ್ಮಿತಾ ಪ್ರಭು ಅವರು ಅಭಿವೃದ್ದಿಡಿಸಿದ ಖಇಇಚಿಟಿಚಿ ಮೊಬೈಲ್ ಅಪ್ಲಿಕೇಶನ್ ಅನ್ನು 21ನೇ ಸೆಪ್ಟೆಂಬರ್ 2024 ರಂದು ಬಿಡುಗಡೆಗೊಳಿಸಿ ಮಾತನಾಡಿ, ನರಸಮಸ್ಯೆಯಿಂದ ಬಳಲುತ್ತಿರುವ ಚಿಕ್ಕಮಕ್ಕಳು ನೇತ್ರದೋಷ ಹೊಂದಿರುತ್ತಾರೆ. ಅವರು ಸಾಮಾಜಿಕ ಭವಿಷ್ಯಕ್ಕಾಗಿ ಸಂಶೋಧನೆಗಳ ಅಗತ್ಯ ಸಾಕಷ್ಟಿದೆ. ಆದರೆ ಅವುಗಳ ಕಾರ್ಯರೂಪಕ್ಕೆ ತರುವಲ್ಲಿ ಹಿಂದೆ ಬೀಳುತ್ತಾರೆ. ಅಲ್ಲದೇ ವೈದ್ಯಕೀಯ ದಾಖಲೆಗಳನ್ನು ಸರಿಯಾಗಿ ದಾಖಲಿಸುವುದಿಲ್ಲ, ಇದರಿಂದ ಚಿಕಿತ್ಸೆಯಲ್ಲಿ ತೊಂದರೆ ಅನುಭವಿಸಬೇಕಾಗುತ್ತದೆ. ಆದ್ದರಿಂದ ವೈದ್ಯಕೀಯ ದಾಖಲೆಗಳನ್ನು ಸರಿಯಾಗಿ ದಾಖಲಿಸಿ ಸುರಕ್ಷಿತವಾಗಿಡಿ ಎಂದು ತಿಳಿಸಿದರು. ಈ ಮೊದಲು ಎಲ್ಲ ವೈದ್ಯಕೀಯ ಉಪಕರಣಗಳನ್ನು ವಿದೇಶದಿಂದ ತರಲಾಗುತ್ತಿತ್ತು. ಇವುಗಳ ಬೆಲೆ ಸಾಮಾನ್ಯವಾಗಿ ಹೆಚ್ಚು, ಇಂದು ನಮ್ಮಲ್ಲಿಯೇ ಅನೇಕ ವೈದ್ಯರು ಇಂಜಿನಿಯರಗಳಾಗಿದ್ದಾರೆ. ಅದರಂತೆ ಅವುಗಳು ಉತ್ತಮ ರೀತಿಯಿಂದ ಕಾರ್ಯನಿರ್ವಹಿಸಿದರೆ ದೇಶಾದ್ಯಂತ ಪ್ರಾಚಾರ ಮಾಡಿ ಸಾಮಾಜಕ್ಕೆ ನೆರವಾಗುವ ಕಾರ್ಯ ಮಾಡಬೇಕೆಂದು ಕರೆ ನೀಡಿದರು.

ಜೆಎನ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎನ್ ಎಸ್ ಮಹಾಂತಶೆಟ್ಟಿ ಅವರು ಮಾತನಾಡಿ, ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡುವವರೆ ಹೆಚ್ಚಿದ್ದಾರೆ. ಆದರೆ ನರಸಮಸ್ಯೆಯಿಂದ ಬಳಲುತ್ತಿರುವ ಚಿಕ್ಕಮಕ್ಕಳ ಕಾಳಜಿವಹಿಸಿ ಅವರ ದೃಷ್ಠಿಯನ್ನು ಮರಳಿ ತರಲು ಪ್ರಯತ್ನಿಸಬೇಕಾಗಿದೆ. ಹೆಚ್ಚಿನ ಅಪಾಯದ ಶಿಶುಗಳನ್ನು ಗುರುತಿಸಲು ಈ ಮೊಬೈಲ್ ಆಪ್ ಸಹಾಯ ಮಾಡಲಿದೆ. ಸ್ಟಾಟಿಕಲ್ ದೃಷ್ಟಿಹೀನತೆಯ ಆರಂಭಿಕ ಪತ್ತೆ ಮತ್ತು ಆರಂಭಿಕ ಚಿಕಿತ್ಸೆಯು ಮಕ್ಕಳಿಗೆ ಪ್ರಯೋಜನವಾಗಲಿದೆ. ಮಕ್ಕಳು ಇದರ ಪ್ರಯೋಜನ ಪಡೆಯುತ್ತಾರೆ. ದೃಷ್ಟಿದೋಷವು ಮಕ್ಕಳ ಬೆಳವಣಿಗೆಗೆ ಮತ್ತಷ್ಟು ಅಡ್ಡಿಪಡಿಸುತ್ತದೆ. ಆದ್ದರಿಂದ, ಇಂತ ಸಂಶೋಧನೆಗಳು ಹಾಗೂ ವೈದ್ಯಕೀಯ ಉಪಕರಣಗಳು ಅತ್ಯವಶ ಎಂದು ಹೇಳಿದರು. ಹುಬ್ಬಳ್ಳಿಯ ಎಂ ಎಂ ಜೋಷಿ ಕಣ್ಣಿನ ಸಂಸ್ಥೆಯ ಡಾ. ಕೃಷ್ಣಪ್ರಸಾದ ಆರ್. ಅವರು ಮಾತನಾಡಿ, ಬದಲಾವಣೆ ಯಾವಾಗಲೂ ಹೊರಗಿನಿಂದ ಬರಬೇಕೆಂದು ನಾವು ಬಯಸುತ್ತೇವೆ. ಇದು ಬಹು ಶಿಸ್ತಿನ ವಿಷಯವಾಗಿದ್ದು, ನಮ್ಮಲ್ಲಿಂದಲೇ ಬದಲಾವಣೆಯಾಗಬೇಕು. ಶಸ್ತ್ರಚಿಕಿತ್ಸಾ ವಿಭಾಗ, ಫಿಸಿಯೋಥೆರಪಿ ಮಕ್ಕಳ ಮನಶಾಸ್ತ್ರಜ್ಞ, ಮನೋವೈದ್ಯಕೀಯ ಸೇರಿದಂತೆ ಒಬ್ಬ ಮನುಷ್ಯನನ್ನು ಆರೋಗ್ಯವಾಗಿಡಲು ಅವಶ್ಯವಿರುವ ಎಲ್ಲ ವಿಭಾಗಗಳು ಇವೆ. ಅವರೆಲ್ಲರೂ ಉತ್ತಮ ಪ್ರದರ್ಶನವನ್ನು ನೀಡಲು ಒಟ್ಟಾಗಿ ಬರುವ ಪರಿಪೂರ್ಣ ತಂತ್ರವನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಹಿರಿಯ ತಜ್ಞವೈದ್ಯರಾದ ಡಾ. ವಿ ಡಿ ಪಾಟೀಲ, ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರಾದ ಡಾ. ಕರ್ನಲ್ ಎಂ ದಯಾನಂದ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಕುಲಸಚಿವ ಡಾ. ಎಂ ಎಸ್ ಗಣಾಚಾರಿ, ಉಪಪ್ರಾಚಾರ್ಯ ಡಾ. ರಾಜೇಶ ಪವಾರ, ಡಾ. ಆರಿಫ್ ಮಾಲ್ದಾರ, ತಜ್ಞ ಡಾ.ಅರವಿಂದ ತೆನಗಿ ಹಾಗೂ ಡಾ.ಎಸ್.ಬಿ.ಪಾಟೀಲ್, ಡಾ.ಭಾಗ್ಯಜ್ಯೋತಿ, ಡಾ.ಚೇತನಾ, ಮಕ್ಕಳ ನರರೋಗ ತಜ್ಞವೈದ್ಯರಾದ ಡಾ.ಮಹೇಶ ಕಮತೆ, ಮಕ್ಕಳ ಮನೋವೈದ್ಯ ಡಾ.ವಿನಾಯಕ ಕೋಪರ್ಡೆ, ನವಜಾತ ಶಿಶುಗಳ ತಜ್ಞವೈದ್ಯರಾದ ಡಾ. ರಾಮಚಂದ್ರ ಭಟ್, ಡಾ ಮೀನಾ, ಡಾ ನೇಹಾ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು. ವಿಭಾಗದ ಮುಖ್ಯಸ್ಥ ಡಾ.ಶಿವಾನಂದ ಬೂಬನಾಳೆ ಸ್ವಾಗತಿಸಿದರು. ಡಾ. ಸ್ಮಿತಾ ಪ್ರಭು ವಂದಿಸಿದರು.

ಸ್ವಚ್ಛತೆಗೆ ಮೊದಲ ಆದ್ಯತೆ ನೀಡಿ : ರವಿ ಬಂಗಾರೆಪ್ಪನವರ

ಉದಯಕಾಲ ನ್ಯೂಸ್

ಬೈಲಹೊಂಗಲ: ಗ್ರಾಮೀಣ ಪ್ರದೇಶದಲ್ಲಿ ಪ್ರತಿಯೊಂದು ಕುಟುಂಬವು ಹಲವಾರು ರೀತಿಯ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಬೇಕಾದಲ್ಲಿ ಸ್ವಚ್ಛತೆಗೆ ಮೊದಲ ಆದ್ಯತೆಯನ್ನು ನೀಡಬೇಕು ಎಂದು ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನವರ ಹೇಳಿದರು.

ತಾಲೂಕಿನ ನಾಗನೂರ ಗ್ರಾಮ ಪಂಚಾಯತಿಯ ಕಸವಿಲೇವಾರಿ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಲ್ಲಿ ನಿರ್ಮಾಣವಾದ ಕಸವಿಲೇವಾರಿ ಘಟಕವನ್ನು ಗ್ರಾಮೀಣ ಪ್ರದೇಶದಲ್ಲಿ ಜಿಲ್ಲೆಯಾದ್ಯಂತ ಈಗಾಗಲೇ ನಿರ್ಮಾಣ ಮಾಡಲಾಗಿದೆ. ಗೃಹಪಯೋಗಿ ಬಳಕೆಯ ವಸ್ತುಗಳು ಹಾಗೂ ಹಸಿ ಮತ್ತು ವನ ಕಸವನ್ನು ಗ್ರಾಮದ ಪ್ರತಿ ಮನೆ ಮನೆಗೆ ಭೇಟಿ ನೀಡಿ, ಸಂಗ್ರಹಿಸುವ ಮೂಲಕ ಗ್ರಾಮವನ್ನು ಸ್ವಚ್ಛವಾಗಿ ಇಡುವಂತೆ ಮಾಡಬೇಕು. ಇದರ ಬಳಕೆಯನ್ನು ಗ್ರಾಮಸ್ಥರು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಪ್ರಸ್ತುತ ನರೇಗಾ ಯೋಜನೆಯಲ್ಲಿ ಸಮುದಾಯ ಶೌಚಾಲಯ, ಬೂದು ನೀರು ನಿರ್ವಹಣೆ ಘಟಕ, ಕಸವಿಲೇವಾರಿ ಘಟಕಗಳನ್ನು ನಿರ್ಮಾಣ ಮಾಡುವುದರಿಂದ ಗ್ರಾಮೀಣ ಸ್ವಚ್ಛತೆಗೆ ಎಲ್ಲರೂ ಕೈಜೊಡಿಸಬೇಕು. ಸ್ವಚ್ಛ ಭಾರತ ಮಿಷನ (ಗ್ರಾ) ಯೋಜನೆಯಡಿಯಲ್ಲಿ ಪ್ರತಿ ಕುಟುಂಬಕ್ಕೂ ವೈಯಕ್ತಿಕ ಶೌಚಾಲಯ ಹಾಗೂ ಕಸವಿಲೇವಾರಿ ವಿಂಗಡನೆಯ ಕ್ರಿಯೆಯನ್ನು ಮಾಡುತ್ತಿದ್ದು ಗ್ರಾಮೀಣ ಸ್ವಸಹಾಯ ಸಂಘದ ಮಹಿಳೆಯರು ಕಸವಿಲೇವಾರಿ ವಿಂಗಡನೆಯಲ್ಲಿ ಕೈಜೊಡಿಸುತ್ತಿದ್ದು ಮತ್ತು ವಿಲೇವಾರಿ ವಾಹನವನ್ನು ಸಹ ಮಹಿಳೆಯರು ಚಲಾಯಿಸುತ್ತಿದ್ದಾರೆ. ಇದರಿಂದ ಮಹಿಳೆಯರಿಗೆ ಈ ಯೋಜನೆಗಳ ಕುರಿತು ಸಂಪೂರ್ಣವಾದ ಮಾಹಿತಿಯನ್ನು ನೀಡುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ತಾ.ಪಂ.ಸಹಾಯಕ ನಿರ್ದೇಶಕರಾದ ವಿಜಯ ಪಾಟೀಲ, ರಘು ಬಿ.ಎನ್., ಗ್ರಾ.ಪಂ.ಅಧ್ಯಕ್ಷೆ ಬಸವ್ವ ಶಿರಸಂಗಿ, ತಾ.ಪಂ.ತಾಂತ್ರಿಕ ಸಂಯೋಜಕ ನಾಗರಾಜ ಯರಗುದ್ದಿ, ಐಇಸಿ ಸಂಯೋಜಕ ಎಸ್. ವ್ಹಿ.ಹಿರೇಮಠ, ತಾಂತ್ರೀಕ ಸಹಾಯಕ ನಾಗರಾಜ ಕಾಗತಿ, ಸದಸ್ಯರಾದ ಚಂದ್ರಮಾಳಿ ತಿಗಡಿ, ಅನ್ನವ್ವ ಪೂಜೇರಿ, ಅದೃಶ ಪತ್ತಾರ, ಕಲ್ಲವ್ವ ಹೊಸಮನಿ, ಪಿಡಿಓ ಗಂಗಪ್ಪ ಮರೆನ್ನವರ, ಗೋಪಾಲ ಹುಬ್ಬಳಿಕರ, ಕಾರ್ಯದರ್ಶಿ ರಾಕೇಶ ಹತ್ತಿಲಮನಿ, ಗ್ರಾ.ಪಂ. ಸಿಬ್ಬಂದಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು. ಎಮ್.ಬಿ.ಕೇದಾರಜಿ ನಿರೂಪಿಸಿ, ವಂದಿಸಿದರು.

ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸಾ ಶಿಬಿರ ಉದ್ಘಾಟನೆ

ಉದಯಕಾಲ ನ್ಯೂಸ್

ರಾಮದುರ್ಗ: ಲಯನ್ಸ್ ಸಂಸ್ಥೆ ರಾಮದುರ್ಗ, ಹುಬ್ಬಳ್ಳಿಯ ಡಾ. ಎಂ.ಎಂ. ಜೋಶಿ ನೇತ್ರ ವಿಜ್ಞಾನ ಸಂಸ್ಥೆ, ಸಾರ್ವಜನಿಕ ಆಸ್ಪತ್ರೆ, ರಾಮದುರ್ಗ ಮತ್ತು ಬೆಳಗಾವಿ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಉಚಿತ ನೇತ್ರತಪಾಸಣೆ ಮತ್ತು ಶಸ್ತಚಿಕಿತ್ಸಾ ಶಿಬಿರ ಜರುಗಿತು.

ಪಟ್ಟಣದ ಎಂಎಲ್‌ಬಿಸಿಯಲ್ಲಿರುವ ಪಿ.ಎಂ.ಪಾಲರೇಶಾ ಲಯನ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಶನಿವಾರ ಜರುಗಿದ ಶಿಬಿರವನ್ನು ಹುಬ್ಬಳ್ಳಿಯ ಜೋಶಿ ಆಸ್ಪತ್ರೆಯ ನೇತ್ರತಜ್ಞೆ ಡಾ. ದಾನೇಶ್ವರಿಅವರು ಉದ್ಘಾಟಿಸಿ, ಕಣ್ಣಿನ ಸಂರಕ್ಷಣೆಯಕುರಿತು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಡಾ. ಎಂ.ಎಂ. ಜೋಶಿ ಆಸ್ಪತ್ರೆಯ ಶಿಬಿರ ಸಂಯೋಜಕ ವಾದಿರಾಜ ಕಟ್ಟಿ ಅವರು ಮಾತನಾಡಿ, ಲಯನ್ಸ್ ಸಂಸ್ಥೆಯ ಸೇವಾ ಕಾರ್ಯಗಳು ಬಡವರಿಗೆ ಬಹಳ ಸಹಾಯಕಾರಿಯಾಗಿದ್ದು, ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಟ್ರಸ್ಟ್‌ಅಧ್ಯಕ್ಷ ಬಾಬಣ್ಣ ಫತ್ತೇಪೂರ ಮಾತನಾಡಿದರು. ಲಯನ್ಸ್ ಸಂಸ್ಥೆ ಅಧ್ಯಕ್ಷ ಪಿ.ವಿ. ಕಂಬಾರ,ಕಾರ್ಯದರ್ಶಿ ಸುನಿಲ್ ಹೊಂಗಲ, ಖಜಾಂಚಿ ಬಿ.ಪಿ.ಅರಳಿಮಟ್ಟಿ, ಸರಕಾರಿ ಆಸ್ಪತ್ರೆಯ ಶಂಕರ ಲಕಾಟ್ಟಿ, ಯಶೋಧ ತೋರಣಗಟ್ಟಿ, ಡಾ.ಸಿ.ಜಿ ಅಗಡಿ, ಅಪ್ಪು ದಿಂಡವಾರ, ಎಂ.ಎಸ್. ಕೊಟ್ರನ್ನವರ, ಬಿ.ಎಲ್. ಸಂಕನಗೌಡರ, ಬಿ.ಎಸ್. ಗದಗ, ಗಂಗಾಧರ್‌ಕಂಬಾರ, ವೈ.ಬಿ.ಕಕರಡ್ಡಿ, ವಿ.ವಿ.ಕೊಂಡಾ, ಬಿ.ಎಲ್. ಸಂಕನಗೌಡರ ಸೇರಿದಂತೆ ಹಲವರು ಇದ್ದರು ಭಾಗವಹಿಸಿದ್ದರು.

ಒಟ್ಟು 135 ಜನರ ಕಣ್ಣು, ರಕ್ತದಒತ್ತಡ ಮತ್ತು ಸಕ್ಕರೆ ರೋಗವನ್ನು ಉಚಿತವಾಗಿ ಪರೀಕ್ಷಿಸಲಾಯಿತು. ಪೊರೆ ಇದ್ದ 46 ಜನರನ್ನು ಶಸ್ತ ಚಿಕಿತ್ಸೆಗೆ ಅಯ್ಕೆಮಾಡಿ ಹುಬ್ಬಳ್ಳಿಯ ಡಾ. ಎಂ.ಎಂ.ಜೋಶಿ ಆಸ್ಪತ್ರೆಗೆ ಕಳುಹಿಸಲಾಯಿತು.

ಮಹಾಲಕ್ಷ್ಮೀ ಬ್ಯಾಂಕನ್ನು ನಾನು ಮುಚ್ಚಲು ಬಿಡುವದಿಲ್ಲ, ಠೇವಣಿದಾರರ ಹಣಕ್ಕೆ ನಾನು ಜವಾಬ್ದಾರನಿದ್ದೇನೆ: ಶಾಸಕ ರಮೇಶ ಜಾರಕಿಹೊಳಿ

ಉದಯಕಾಲ ನ್ಯೂಸ್

ಗೋಕಾಕ: ಹಿರಿಯರಾದ ಬಾಳಾಸಾಹೇಬ ಮಾಂಗಳೇಕರ ಸೇರಿ ಇನ್ನಿತರ ಹಿರಿಯರು ಕಟ್ಟಿದ ಮಹಾಲಕ್ಷ್ಮೀ ಬ್ಯಾಂಕನ್ನು ನಾನು ಮುಚ್ಚಲು ಬಿಡುವದಿಲ್ಲ, ಠೇವಣಿದಾರರ ಹಣಕ್ಕೆ ನಾನು ಜವಾಬ್ದಾರನಿದ್ದೇನೆ. ಬ್ಯಾಂಕನ ಗ್ರಾಹಕರು ಆತಂಕ ಪಡುವ ಅವಶ್ಯಕತೆ ಇಲ್ಲ ಅತಿಶೀಘ್ರದಲ್ಲಿ ನಿಮ್ಮ ಹಣವನ್ನು ವಾಪಸ್ಸು ಕೊಡಿಸುತ್ತೇನೆ ಎಂದು ಶಾಸಕ ರಮೇಶ ಜಾರಕಿಹೊಳಿ ಹೇಳಿದರು.

ಅವರು, ಶನಿವಾರದಂದು ನಗರದ ಶ್ರೀ ಮಹಾಲಕ್ಷ್ಮೀ ಸಭಾ ಭವನದಲ್ಲಿ ಮಹಾಲಕ್ಷ್ಮೀ ಬ್ಯಾಂಕನ ಗ್ರಾಹಕರ ಸಭೆಯಲ್ಲಿ ಮಾತನಾಡಿ, ಕಳೆದ ಎರಡ್ಮೂರು ದಿನಗಳ ಹಿಂದೆ ಬ್ಯಾಂಕನ ಸಿಬ್ಬಂದಿಗಳು ಅವ್ಯವಹಾರ ನಡೆಸಿರುವ ಘಟನೆ ತಿಳಿದು ಬಂದಿದೆ. ಈ ಬಗ್ಗೆ ಆಡಳಿತ ಮಂಡಳಿಯ ಬಗ್ಗೆಯೂ ನನಗೆ ಸಂಶಯವಿತ್ತು ಆದರೆ ಈ ಅವ್ಯವಹಾರದಲ್ಲಿ ಆಡಳಿತ ಮಂಡಳಿಯವರು ಭಾಗಿಯಾಗಿಲ್ಲ. ಬ್ಯಾಂಕನಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಸಿಬ್ಬಂದಿ 2021ರಿಂದ ಈ ವರೆಗೆ 6ಕೋಟಿ 90ಲಕ್ಷ ಹಣ ಡಿಪಾಸಿಟ್ ಮಾಡಿ ಸುಮಾರು 95ಕೋಟಿ ರೂಪಾಯಿ ಅವ್ಯವಹಾರ ನಡೆಸಿದ್ದಾರೆ. ಅದರಲ್ಲಿ 20ಕೋಟಿಗೂ ಹೆಚ್ಚು ಹಣ ಪಾವತಿಸಿದ್ದು ಇನ್ನು 74ಕೋಟಿ ರೂಪಾಯಿ ಬ್ಯಾಂಕಗೆ ಪಾವತಿಸಬೇಕಿದೆ. ಈ ಅವ್ಯವಹಾರಕ್ಕೆ ಸಂಭಂಧಿಸಿದಂತೆ 14ಜನ ಸಿಬ್ಬಂದಿಗಳ ವಿರುದ್ಧ ಗೋಕಾಕ ಪೋಲಿಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದೇನೆ. ಆರ್‌ಬಿಐ ಹಾಗೂ ಸರಕಾರದ ಮಾರ್ಗಸೂಚಿಯ ಪ್ರಕಾರ ಮೋಸ ಹೋದ ಬಡವರ ಹಣ ಮರಳಿಸುತ್ತೇನೆ. ಮಹಾಲಕ್ಷ್ಮೀ ಬ್ಯಾಂಕನಲ್ಲಿ ಹೆಚ್ಚಾಗಿ ಬಡ ಜನರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಮದುಗೆ ಕಾರ್ಯ ಹೀಗೆ ಇನ್ನಿತರ ಸೌಲಭ್ಯಕ್ಕಾಗಿ ಠೇವಣಿ ಮಾಡಿದ್ದಾರೆ. ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಖಾತೆ ಹಾಗೂ ವ್ಯಾಪಾರಸ್ಥರ ಹಣಕ್ಕೆ ನಾನು ಜವಾಬ್ದಾರನಿದ್ದು ಎಲ್ಲ ಹಣವನ್ನು ಮರಳಿಸುತ್ತೇನೆ ಎಂದು ಶಾಸಕರು ಭರವಸೆ ನೀಡಿದರು.

ರಾಜ್ಯದಲ್ಲಿ ಇಂತಹ ಬ್ಯಾಂಕಗಳ ಅನೇಕ ಅವ್ಯವಹಾರ ಪ್ರಕರಣಗಳು ಆಗಿ ಹೋಗಿವೆ. ಅವ್ಯವಹಾರ ಎಸಗಿದವರು ಬಂಧನವಾಗಿ ಆಮೇಲೆ ಬೇಲ್ ಮೇಲೆ ಬಂದಿದ್ದಾರೆ ಆದರೆ ಈ ವರೆಗೆ ಬ್ಯಾಂಕ ಅವ್ಯವಹಾರ ಪ್ರಕರಣಗಳು ಸೂಕಾಂತ್ಯವಾಗಿಲ್ಲ, ಎಲ್ಲವೂ ನಾಟಕೀಯ ಪ್ರಕರಣಗಳು. ಮಹಾಲಕ್ಷ್ಮೀ ಬ್ಯಾಂಕನಲ್ಲಿ ಸ್ವತಃ ನನ್ನ ಮಗನ ಹಣವು ಇದೆ. ನನ್ನ ಮಗನಿಗು ತಿಳಿಸಿ ಹೇಳಿದ್ದೇನೆ. ಹಿರಿಯರ ಪರಿಶ್ರಮದಿಂದ ಬ್ಯಾಂಕ ಉನ್ನತ ಮಟ್ಟಕ್ಕೆ ಏರಿದೆ. ಸಿಬ್ಬಂದಿಗಳು ಮಾಡಿದ ಅವ್ಯವಹಾರದಿಂದ ಬ್ಯಾಂಕಿಗೆ ಕೆಟ್ಟು ಹೆಸರು ಬಂದಿದೆ. ಮಹಾಲಕ್ಷ್ಮೀ ಬ್ಯಾಂಕ ಬಂದ್ ಮಾಡಿಸಲು ಬಹಳಷ್ಟು ಜನ ಕಾತುರದಿಂದ ನೋಡುತ್ತಿದ್ದಾರೆ. ಆದರೆ ಮಹಾಲಕ್ಷ್ಮೀ ಬ್ಯಾಂಕ ಮತ್ತೆ ತೆಲೆ ಎತ್ತಿ ನಿಲ್ಲಬೇಕು. ಅವ್ಯವಹಾರ ಎಸಗಿರುವವರ ಆಸ್ತಿಯನ್ನು ಮುಟ್ಟುಗೊಲು ಹಾಕಿಸಿ ನಿಮ್ಮ ಹಣವನ್ನು ಮರಳಿಸುತ್ತೇನೆ. ಬ್ಯಾಂಕಿನಿಂದ ಮೋಸ ಆದಮೇಲೆ ರಾಜಕಾರಣಿಗಳು, ಅಧಿಕಾರಿಗಳು ಸಭೆ ಮಾಡಿ ಬಡವರಿಗೆ ನ್ಯಾಯ ದೊರಕಿಸಿಕೊಡುವ ಕಾರ್ಯ ರಾಜ್ಯದಲ್ಲಿ ಇದೆ ಮೊದಲು. ಬ್ಯಾಂಕ ಎಂದಿನಂತೆ ಮತ್ತೆ ಕಾರ್ಯನಿರ್ವಹಿಸಿ ಇತಿಹಾಸ ಸೃಷ್ಟಿಯಾಗಬೇಕು. ನಿಮ್ಮ ಹಣಕ್ಕೆ ನಾನು ಜವಾಬ್ದಾರಿ ಬ್ಯಾಂಕನ ಆಸ್ತಿಪಾಸ್ತಿಗೆ ಹಾನಿಮಾಡದಂತೆ ಎಂದು ಕೈಮುಗಿದು ಮನವಿ ಮಾಡಿದರು.

ಸಿಪಿಐ ಗೋಪಾಲ ರಾಠೋಡ ಮಾತನಾಡಿ ಮಹಾಲಕ್ಷ್ಮೀ ಬ್ಯಾಂಕ ಅವ್ಯವಹಾರದಲ್ಲಿ ಪಾಲ್ಗೊಂಡ ಸಿಬ್ಬಂದಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುವದು. ಗ್ರಾಹಕರು ಬ್ಯಾಂಕ ಮುಂದೆ ಜಮಾವಣೆಯಾಗದೆ ತಮ್ಮ ದೂರುಗಳಿದ್ದರೆ ಪೋಲಿಸ್ ಠಾಣೆಗೆ ಭೇಟಿ ನೀಡುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ತಹಶೀಲದಾರ ಡಾ.ಮೋಹನ ಭಸ್ಮೆ ಸೇರಿದಂತೆ ಸಾವಿರಕ್ಕೂ ಹೆಚ್ಚು ಜನ ಮಹಾಲಕ್ಷ್ಮೀ ಬ್ಯಾಂಕನ ಗ್ರಾಹಕರು ಭಾಗವಹಿಸಿದ್ದರು.

ಮಹಾಲಕ್ಷ್ಮೀ ಬ್ಯಾಂಕ ಅವ್ಯವಹಾರ ಸಂಭಂದಿಸಿದಂತೆ ಗೋಕಾಕ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬ್ಯಾಂಕನ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂಧಿಗಳಾದ ಸಾಗರ ಸಬಕಾಳೆ, ವಿಶ್ವನಾಥ ಬಾಗಡೆ, ಸಂಭಾಜಿ ಗುರುಪಾದೆ, ಸಿದ್ದಪ್ಪ ಪವಾರ, ದಯಾನಂದ ಉಪ್ಪಿನ ಸೇರಿ ತಮ್ಮ ಸಂಬಂಧಿಕರ ಜೊತೆಗೂಡಿ ವಂಚಿಸಿದ್ದಾರೆ. ಸಂಜನಾ ಸಬಕಾಳೆ, ಮಲ್ಲವ್ವಾ ಸಬಕಾಳೆ, ಗೌರವ್ವ ಹವಾಲ್ದಾರ, ಚಂದ್ರವ್ವ ಹವಾಲ್ದಾರ, ಪರಸಪ್ಪ ಮಾಳೋಜಿ, ರಾಧಾ ಮಾಳೋಜಿ, ಸಂದೀಫ ಮರಾಠೆ, ಕಿರಣ ಸುಪಲಿ ವಿರುದ್ಧ ವಂಚನೆ ಪ್ರಕರಣ ದಾಖಲಾಗಿದೆ. ಬ್ಯಾಂಕನ ಚೇರಮನ ಜಿತೇಂದ್ರ ಮಾಂಗಳೇಕರ ದೂರು ನೀಡಿದ್ದಾರೆ.

ಪತ್ರಿಕಾ ಪ್ರಕಟಣೆ

ಮಾನ್ಯರೆ,

ನಾನು ಕಕ್ಷಿಗಾರನಾದ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಹುಲಗಬಾಳಿ ರಹವಾಸಿಯಾದ ಶ್ರೀ ಕಲ್ಲಪ್ಪಾ ಭೀಮಪ್ಪ ತವಟೆ ಇವರು ಕೆನರಾ ಬ್ಯಾಂಕಿನಿಂದ ಬೆಳೆ ಸಾಲ ಮತ್ತು ಶೇತ್ಕಿ ಅಭಿವೃದ್ಧಿ ಸಾಲವನ್ನು ಪಡೆದುಕೊಳ್ಳುವ ಸಲುವಾಗಿ, ಸದರಿಯವನ ತಂದೆಯ ಹೆಸರಿನಿಂದ ಇರುವ ಅಥಣಿ ತಾಲೂಕಿನ ಮದಭಾವಿ ಗ್ರಾಮದ ರಿ.ಸ.ನಂ 320/2 ಕ್ಷೇತ್ರ 02 ಎಕರೆ 37 ಗುಂಟೆ ಆಕಾರ ರೂ. 00-97 ಪೈಸೆ ಜಮೀನವನ್ನು ನನ್ನ ಕಕ್ಷಿಗಾರನ ಮೃತ ತಂದೆಯಾದ ಭೀಮಪ್ಪ ವಿರುಪಾಕ್ಷ ತವಟೆ ಇವರು 1) ವಗಣೆಪ್ಪ ಸಿದ್ರಾಮ ನಾಯಕ ಮತ್ತು ಇತರರ ಕಡೆಯಿಂದ ಖರೀದಿ ಪಡೆದುಕೊಂಡಿದ್ದು ಇರುತ್ತದೆ. ಸದರಿ ಖರೀದಿ ದಸ್ತಾವೇಜು ನಂ ಎಟಿಎನ್-1- 00379-2007-08 ಆಗಿ ಸಿ.ಡಿ. ನಂ ಎಟಿಎನ್‌ಡಿ66ನೇದ್ದರಲ್ಲಿ ದಿನಾಂಕ: 23/04/2007 ರಂದು ನೋಂದಣಿಯಾಗಿರುತ್ತದೆ.

ಅದೇ ಪ್ರಕಾರ ಅಥಣಿ ತಾಲೂಕಿನ ಮದಭಾವಿ ಗ್ರಾಮದ ರಿ.ಸ.ನಂ 320/3 ಕ್ಷೇತ್ರ 02 ಎಕರೆ 37 ಗುಂಟೆ ಆಕಾರ ರೂ. 00-97 ಪೈಸೆ ಇದರ ಪೈಕಿ 01 ಎಕರೆ 00 ಗುಂಟೆ ಜಮೀನವನ್ನು ನನ್ನ ಕಕ್ಷಿಗಾರನ ಮೃತ ತಂದೆಯಾದ ಭೀಮಪ್ಪ ವಿರುಪಾಕ್ಷ ತವಟೆ ಇವರು ಅಬ್ಬಾಸ ಮಹ್ಮದಲಾಲ ಮಮ್ಮುಲಾಲ ನದಾಫ ಇವರ ಕಡೆಯಿಂದ ಖರೀದಿ ಪಡೆದುಕೊಂಡಿದ್ದು ಇರುತ್ತದೆ. ಸದರಿ ಖರೀದಿ ದಸ್ತಾವೇಜು ನಂ ಎಟಿಎನ್-1- 04259-2007-08 ಆಗಿ ಸಿ.ಡಿ. ನಂ ಎಟಿಎನ್‌ಡಿ77ನೇದ್ದರಲ್ಲಿ ದಿನಾಂಕ: 15/11/2007 ರಂದು ನೋಂದಣಿಯಾಗಿರುತ್ತದೆ.

ಸದರಿ ಖರೀದಿಪತ್ರಗಳನ್ನು ಶ್ರೀ ಕಲ್ಲಪ್ಪಾ ಭೀಮಪ್ಪ ತವಟೆ ಇವನು ತನ್ನ ಮನೆಯಿಂದ ಝುರಾಕ್ಷ ಅಂಗಡಿಗೆ ಹೋಗುವ ವೇಳೆಯಲ್ಲಿ ಎಲ್ಲಿಯೋ ನಜರ ಚುಕಿಯಿಂದ ಕಳೆದುಕೊಂಡಿರುತ್ತಾನೆ. ಎಷ್ಟು ಹುಡುಕಿದರೂ ಸಹ ಸಿಕ್ಕಿರುವುದಿಲ್ಲ, ಸದರಿಯವನು ಖರೀದಿ ಪತ್ರಗಳಲ್ಲಿ ನಮೂದಿಸಿದ ಜಮೀನಗಳ ಮೇಲೆ ಯಾವುದೇ ಬ್ಯಾಂಕಿನಲ್ಲಿ ಹಾಗೂ ಯಾವುದೇ ಖಾಸಗಿ ಬ್ಯಾಂಕಿನಲ್ಲಿ ಸಾಲವನ್ನು ಪಡೆದುಕೊಂಡಿರುವುದಿಲ್ಲ. ಸದರಿ ಮೂಲ ನೋಂದ ಖರೀದಿಪತ್ರವು ಯಾರಿಗಾದರೂ ದೊರೆತಲ್ಲಿ ಅಥವಾ ಸಿಕ್ಕಲ್ಲಿ ಕಲ್ಲಪ್ಪಾ ಭೀಮಪ್ಪ ತವಟೆ ಸಾ: ಹುಲಗಬಾಳಿ ಇವರಿಗೆ ಒಪ್ಪಿಸಬೇಕೆಂದು ವಿನಂತಿ.

ಸದರಿ ಮೂಲ ನೋಂದ ಖರೀದಿಪತ್ರಗಳಿಂದ ಅಥವಾ ಅವುಗಳಲ್ಲಿನ ಜಮೀನಗಳ ಮೇಲಿನಿಂದ ಯಾವುದೇ ರೀತಿಯ ದುರುಪಯೋಗವಾದರೆ ಅದಕ್ಕೆ ಕಲ್ಲಪ್ಪಾ ಭೀಮಪ್ಪ ತವಟೆ ಇವರು ಯಾವುದೇ ರೀತಿಯಿಂದ ಜವಾಬ್ದಾರರು ಆಗುವುದಿಲ್ಲ.

ಕಲ್ಲಪ್ಪಾ ಭೀಮಪ್ಪ ತವಟೆ ಇವರು ಸದರಿ ನೋಂದ ಖರೀದಿಪತ್ರಗಳು ಕಳೆದು ಹೋಗಿರುವುದರ ಬಗ್ಗೆ ಅಥಣಿ ಪೋಲೀಸ ಠಾಣೆಯಲ್ಲಿ ದೂರವನ್ನು ನೀಡಿದ್ದು, ಆ ನಂತರ ಅಥಣಿ ಪೋಲೀಸ ಠಾಣೆಯವರು ಎಷ್ಟು ಹುಡುಕಿದರೂ ಸಹಿತ ಸಿಕ್ಕಿರುವುದಿಲ್ಲ, ಆಗ ಅಥಣಿ ಪೋಲೀಸ ಠಾಣೆಯವರು ದಿನಾಂಕ: 19/09/2024 ರಂದು ಜಿಎಸ್‌ಸಿ ಸಂಖ್ಯೆ: ಪಿಓ1485240600877 ನೇದ್ದರ ಅಡಿಯಲ್ಲಿ ದಾಖಲ ಪಡಿಸಿಕೊಂಡು ಸ್ವೀಕೃತಿ ನೀಡಿರುತ್ತಾರೆ ಅಂತಾ ಬರೆದುಕೊಟ್ಟ ಪತ್ರಿಕಾ ಪ್ರಕಟಣೆ ತಾರೀಖ: 19/09/2024.

ಸ್ಥಳ: ಅಥಣಿ
(ಶ್ರೀ. ಎಮ್.ಎಸ್.ಪಾಟೀಲ)
ವಕೀಲರು ಅಥಣಿ.

ಪೋಷಣ ಅಭಿಯಾನ, ಪೋಷಣ ಮಾಸಾಚರಣೆ ಕಾರ್ಯಕ್ರಮ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನೆ

ಉದಯಕಾಲ ನ್ಯೂಸ್

ರಾಮದುರ್ಗ: ಪ್ರತಿವರ್ಷದಂತೆ ಸೆಪ್ಟಂಬರ ತಿಂಗಳಲ್ಲಿ ಪೋಷಣ ಮಾಸಾಚರಣೆ ಆಚರಣೆ ಮಾಡಲಾಗುತ್ತಿದೆ. ಗರ್ಭಿಣಿಯರಿಗೆ ಆರೋಗ್ಯದ ಅರಿವು, ಪೌಷ್ಟಿಕಾಂಶಗಳ ಬಗೆಗೆ ತಿಳುವಳಿಕೆ ನೀಡಲು ಶಿಶು ಅಭಿವೃದ್ಧಿ ಇಲಾಖೆ ಶ್ರಮಿಸುತ್ತಿದೆ ಎಂದು ಸಹಾಯಕ ಶಿಶು ಅಭಿವೃದ್ಧಿ ಅಧಿಕಾರಿ ಆರ್. ಮಂಜುಳಾ ಹೇಳಿದರು.

ಪಟ್ಟಣದ ವಿದ್ಯಾಚೇತನ ಶಾಲೆಯಲ್ಲಿ 1ನೇ ವಲಯದಲ್ಲಿ ಏರ್ಪಡಿಸಿದ ಪೋಷಣ ಅಭಿಯಾನ, ಪೋಷಣ ಮಾಸಾಚರಣೆ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಂಗನವಾಡಿಗಳ ಮುಖಾಂತರ ಮಹಿಳೆಯರು, ಮಕ್ಕಳಿಗೆ ಪೌಷ್ಟಿಕಾಂಶಭರಿತ ಆಹಾರವನ್ನು ನೀಡಲಾಗುತ್ತಿದೆ. ಪ್ರತಿಯೊಬ್ಬರು ಆರೋಗ್ಯದ ಕಾಳಜಿ ಹೊಂದಿದಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಸಾಧ್ಯವಿದೆ. ಸರಕಾರದಿಂದ ದೊರೆಯುವ ಸೌಲಭ್ಯಗಳ ಲಾಭವನ್ನು ಪ್ರತಿಯೊಬ್ಬರು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ಶಂಕರ ಬೆನ್ನೂರ, ಸರಕಾರ ಮಹಿಳೆಯರು ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸಿ ವೆಚ್ಚ ಮಾಡುತ್ತಿದೆ. ಇಲಾಖೆಯ ಅಧಿಕಾರಿಗಳು ಅವುಗಳ ಜಾಗೃತಿ ಮೂಡಿಸಬೇಕು ಎಂದರು.

ಆರೋಗ್ಯ ಇಲಾಖೆ ವ್ಹಿ.ಎಸ್. ದಸಮನಿ ಮಹಿಳೆ ಮತ್ತು ಮಕ್ಕಳ ಆರೋಗ್ಯ ಕಾಳಜಿ ಕುರಿತು ಅತಿಥಿ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಮೌಲಾನಾ ಶಾಲೆಯ ಮುಖ್ಯೋಪಾಧ್ಯಾಯ ಎಸ್.ಎಸ್. ಹುಡೇದಮನಿ, ಪುರಸಭೆ ಮಾಜಿ ಉಪಾಧ್ಯಕ್ಷ ನಾಗರಾಜ ಕಟ್ಟಿಮನಿ, ಸದಸ್ಯರಾದ ಪ್ರಹ್ಲಾದ ಬಡಿಗೇರ, ಸಂಗೀತಾ ರಾಯಭಾಗ, ರೇಷ್ಮಾ ಮುದಕವಿ ಸೇರಿದಂತೆ ಇತರರಿದ್ದರು.

ಈ ವೇಳೆ ಗರ್ಭಿಣಿ ಬಾಣಂತಿಯರಿಗೆ ಸೀಮಂತ, 6 ತಿಂಗಳು ಪೂರೈಸಿದ ಮಕ್ಕಳಿಗೆ ಅನ್ನಪ್ರಾಸನ, ಮಕ್ಕಳ ಹುಟ್ಟು ಹಬ್ಬ, ವಿವಿಧ ಪೌಷ್ಟಿಕ ಆಹಾರಗಳ ಪ್ರದರ್ಶನ ನಡೆಯಿತು.

ಶಿಶು ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಮುಕ್ತಾ ಜಂಬಾಳೆ ಸ್ವಾಗತಿಸಿದರು. ಎಸ್.ಎಸ್. ಶಿರಸಂಗಿ ಕಾರ್ಯಕ್ರಮ ನಿರೂಪಿಸಿದರು.

ICICI Home Finance
ಕಾರ್ಪೊರೇಟ್ ಕಚೇರಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಹೆಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ ಅಂಧೇರಿ (ಪೂರ್ವ), ಮುಂಬಯಿ-400059, ಭಾರತ.
ಶಾಖಾ ಕಚೇರಿ : ಸಿಟಿಎಸ್ ನಂ. 3414, 1ನೇ ಮಹಡಿ, ಅನಂತ ಪ್ಲಾಜಾ, ಸಾಮ್ರಾದೇವಿ ಗಲ್ಲಿ, ಖಡೆ ಬಜಾರ್, ಬೋಗರ್‌ವೇಸ್ ವೃತ್ತದ ಹತ್ತಿರ, ಬೆಳಗಾವಿ-590002

[ಪ್ರೊವಿಸೊ ನಿಯಮ 8(6) ನ್ನು ನೋಡಿ] ಸ್ಥಿರ ಆಸ್ತಿಗಳ ಮಾರಾಟ ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002, ನಿಯಮ 8(8) ನ್ನು ಓದಿಕೊಂಡಂತೆ ನಿಯಮ 9(1) ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002ರ ಅಡಿ ಇ-ಹರಾಜು ಮೂಲಕ ಸ್ಥಿರಾಸ್ತಿಗಳ ಮಾರಾಟಕ್ಕೆ ಮಾರಾಟ ಸೂಚನೆ.

ಈ ಮೂಲಕ ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಆಸ್ತಿಯನ್ನು ಪೂರಕ ಭದ್ರತಾದಾರರಿಗೆ ಅಡಮಾನ/ಚಾರ್ಜ್ ಮಾಡಿದ್ದು, ಅದನ್ನು ಅಧಿಕೃತ ಅಧಿಕಾರಿ, ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಇವರು ಸ್ವಾಧೀನಕ್ಕೆ ಪಡೆದುಕೊಂಡಿದ್ದು, ಅದನ್ನು ಅವರು "ಎಲ್ಲಿ ಏನಿದೆಯೋ ಹಾಗೆ", ಎಲ್ಲಿ ಹೇಗಿದೆಯೋ ಹಾಗೆ", "ಯಾವುದು ಹೇಗಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ವಿವರಿಸಿದಂತೆ ಮಾರಾಟ ಮಾಡಲಿರುವರು.

ಕ್ರ ಸಂ	ಸಾಲಗಾರರ/ಸಹ-ಸಾಲಗಾರರ ಜಾಮೀನುದಾರರ/ಕಾನೂನುರೀತ್ಯಾ ಉತ್ತರಾಧಿಕಾರಿ ಹೆಸರು/ ಸಾಲದ ಖಾತಾ ಸಂ.	ಭದ್ರತಾ ಆಸ್ತಿ ವಿವರ ಜೊತೆಗೆ ಯಾವುದಾದರೂ ಪರಭಾರೆ ಇದ್ದಲ್ಲಿ ಅದರ ವಿವರ	ಬಾಕಿ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಠೇವಣಿ ಹಣ	ಆಸ್ತಿ ಪರಿವೀಕ್ಷಣೆ ದಿನಾಂಕ & ಸಮಯ	ಹರಾಜಿನ ದಿನಾಂಕ & ಸಮಯ	ಹರಾಜು ದಿನಾಂಕದ ಒಂದು ದಿನ ಮೊದಲು	ಸ್ವಾಧೀನ ಹಂತ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)	(ಹೆಚ್)	(ಐ)
1.	ರಮೇಶ್ ಚಂಗಪ್ಪ ಕಾಕತಿಕರ್ (ಸಾಲಗಾರ) ನಂದ ರಮೇಶ್ ಕಾಕತಿಕರ್ (ಸಹ-ಸಾಲಗಾರ) ಸಾಲದ ಖಾತಾ ಸಂ. LHBGM00001406049 & LHBGM00001406208	ವಾಸಯೋಗ್ಯ ಮನೆ ಸಂ. 89/1, ಪಿಐಡಿ ಸಂ. 13111, ಆರ್ ಎಸ್ ಸಂ. 89/2/1, ಆದರ್ಶ ನಗರ, ವಡಗಾಂವ್ ಬೆಳಗಾವಿ, ಕರ್ನಾಟಕ-590006.	ರೂ. 23,60,440/- ಸೆಪ್ಟಂಬರ್ 10, 2024	ರೂ. 43,45,326/- ರೂ. 4,34,533/-	ಅಕ್ಟೋಬರ್ 04, 2024 11:00ಎಎಂ 03:00ಪಿಎಂ	ಅಕ್ಟೋಬರ್ 10, 2024 02:00ಪಿಎಂ 03:00ಪಿಎಂ	ಅಕ್ಟೋಬರ್ 09, 2024 ಸಂಜೆ 05:00 ಗಂಟೆ ಮೊದಲು	ಭೌತಿಕ ಸ್ವಾಧೀನ
2.	ಸಂದೀಪ್ ಸುರೇಶ್ ಬೈಕೇರಿಕರ್ (ಸಾಲಗಾರ) ಐಶ್ವರ್ಯ ಸಂದೀಪ್ ಬೈಕೇರಿಕರ್ ಸಹ-ಸಾಲಗಾರ) ಸಾಲದ ಖಾತಾ ಸಂ. LHBGM00001404985	ವಿಲ್ಲಾ ನಂ. 3, ಲೋಟಸ್ ಕಂಟ್ರಿ ಆರ್ ಎಸ್ ಸಂ. 119/6, ಸಿಟಿಎಸ್ ಸಂ. 1459/37(ಭಾಗ), ಗೋಡ್ಸೆವಾಡಿ ಬೆಳಗಾವಿ ತಾಲೂಕು ಮತ್ತು ಜಿಲ್ಲೆ ಬೆಳಗಾವಿ	ರೂ. 72,04,522 ಸೆಪ್ಟಂಬರ್ 10, 2024	ರೂ. 94,64,850/- ರೂ. 9,46,485/-	ಅಕ್ಟೋಬರ್ 04, 2024 11:00ಎಎಂ 03:00ಪಿಎಂ	ಅಕ್ಟೋಬರ್ 10, 2024 02:00ಪಿಎಂ 03:00ಪಿಎಂ	ಅಕ್ಟೋಬರ್ 09, 2024 ಸಂಜೆ 05:00 ಗಂಟೆ ಮೊದಲು	ಭೌತಿಕ ಸ್ವಾಧೀನ

ಆನ್‌ಲೈನ್ ಹರಾಜನ್ನು ವೆಬ್‌ಸೈಟ್ (ಯುಆರ್‌ಎಲ್ ಲಿಂಕ್ eauctions.samil.in) ರಲ್ಲಿ ನಮ್ಮ ಹರಾಜು ಏಜೆನ್ಸಿ ಶ್ರೀರಾಮ್ ಆಟೋಮಾಲ್ ಇಂಡಿಯ ಲಿ. ಮೂಲಕ ನಡೆಸಲಾಗುವುದು. ಅಡಮಾನದಾರರಿಗೆ ಕೊನೆಯ ಅವಕಾಶವಾಗಿ ನೋಟೀಸ್ ನೀಡಲಾಗಿದ್ದು, ಒಟ್ಟು ಬಾಕಿಯನ್ನು ಅಕ್ಟೋಬರ್ 09, 2024 ರಂದು ಸಂಜೆ 5.00 ಗಂಟೆಯ ಒಳಗಾಗಿ ಪಾವತಿಸತಕ್ಕದ್ದು ಇಲ್ಲವಾದಲ್ಲಿ ಈ ಮೇಲೆ ವಿವರಿಸಿದ ಸ್ವತ್ತುಗಳನ್ನು ಮಾರಾಟ ಮಾಡಲಾಗುವುದು.

ಉದ್ದೇಶಿತ ಬಿಡ್ಡುದಾರ(ರು) ಅರ್ನೆಸ್ಟ್ ಠೇವಣಿ ಹಣವನ್ನು (ಇಎಂಡಿ) ಕಡ್ಡಾಯವಾಗಿ ಆರ್‌ಟಿಜಿಎಸ್/ಡಿಮ್ಯಾಂಡ್ ಡ್ರಾಫ್ಟ್ (ಡಿಡಿ)/(ಅಂಕಣ ಇ ಯನ್ನು ಆಧಾರ ಮಾಡಿಕೊಳ್ಳಿ) ನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಇಲ್ಲಿಗೆ ಈ ಮೇಲೆ ತಿಳಿಸಿದ ವಿಳಾಸಕ್ಕೆ ಅಕ್ಟೋಬರ್ 09, 2024 ರಂದು ಸಂಜೆ 04.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಉದ್ದೇಶಿತ ಬಿಡ್ಡುದಾರ(ರು) ನೋಂದಣಿ ನಮೂನೆಯ ಸಹಿ ಮಾಡಿದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು ಮತ್ತು ಬಿಡ್‌ನ ನಿಯಮ ಮತ್ತು ನಿಬಂಧನೆಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಈ ಮೇಲೆ ಹೆಸರಿಸಿದ ಶಾಖೆಗೆ ಅಕ್ಟೋಬರ್ 09, 2024 ರಂದು ಸಂಜೆ 5.00ಗಂಟೆಯ ಒಳಗಾಗಿ ಕಳುಹಿಸತಕ್ಕದ್ದು. ಅರ್ನೆಸ್ಟ್ ಠೇವಣಿ ಹಣ ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) ಯನ್ನು ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್ ನಿಂದ "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ.-ಹರಾಜು" ಪರವಾಗಿ ಬೆಳಗಾವಿ, ಬೆಳಗಾಂ ಇಲ್ಲಿ ಪಾವತಿಯಾಗುವಂತೆ ಪಡೆಯಬೇಕು.

ಆಸ್ತಿ ಪರಿವೀಕ್ಷಣೆ ಸಂಬಂಧ ಹೆಚ್ಚಿನ ಸ್ಪಷ್ಟೀಕರಣಕ್ಕಾಗಿ, ಮಾರಾಟದ ನಿಯಮ ಮತ್ತು ನಿಬಂಧನೆಗಳು ಅಥವಾ ಬಿಡ್ ಸಲ್ಲಿಕೆ ಇತ್ಯಾದಿಗಳಿಗೆ ದಯವಿಟ್ಟು ಸಂಪರ್ಕಿಸಿ : ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, ಮೊ.ಸಂ. 9920807300. ಅಧಿಕೃತ ಅಧಿಕಾರಿಯವರು ಯಾವುದೇ ಕಾರಣ ನೀಡದೆ ಎಲ್ಲಾ ಅಥವಾ ಯಾವುದೇ ಬಿಡ್‌ನ್ನು ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗಾಗಿ ದಯವಿಟ್ಟು ಭೇಟಿ ನೀಡಿ : https://www.icicihfc.com

ಅಧಿಕೃತ ಅಧಿಕಾರಿ, "ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್"
ದಿನಾಂಕ : ಸೆಪ್ಟಂಬರ್ 22,2024. ಸ್ಥಳ: ಬೆಳಗಾವಿ, ಬೆಳಗಾಂ
ಸಿಐಎನ್ ಸಂಖ್ಯೆ : ಯು65922ಎಂಹೆಚ್1999ಪಿಎಲ್‌ಸಿ120106.

Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd impression Building 3360/4, Gondi halli galli Belagavi-590001, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi, ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030 and Published at no 1576, Rame Gowda Building, 2nd floor, V.V.Road, Mandya-571 401. ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, SHIMOGA- 577 201 **Editor: K N Puttalingaiah** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume: 05 Issue: 181